ಎಲ್ಲಿಲ್ಲದ ಚಡಪಡಿಕೆ ಎನಿಸುತ್ತಿತ್ತು. ತಾನು ಆವತ್ತು ಅವರಿಗೆ ಸರಿಯಾದ ಉತ್ತರ ಕೊಡಲಿಲ್ಲವಲ್ಲ ಎಂಬ ಕೊರಗು, ಸ್ತಬ್ಧತೆಯನ್ನು ಒಡೆಯುವಂತಹ ನೋವು ಅವನನ್ನು ಬಾಧಿಸುತ್ತಲೇ ಇರುತ್ತಿದ್ದವು. ಆದರೆ ಅದೇ ಸಮಯ ತನ್ನ ದಾರಿ ಬೇರೆ ಎಂಬುದೂ ಅವನಿಗೆ ತಿಳಿದಿತ್ತು. ಬದುಕಿನಿಂದ ಅವನು ಬಯಸುವ ಉತ್ತರಗಳು ಅವರದಕ್ಕಿಂತ ತೀರ ಭಿನ್ನವಾಗಿದ್ದವು.

'ಇಲ್ಲ ಅಪ್ಪಯ್ಯ, ನಂಗೇನ್ ಕುಡಿಯೂ ಚಟ ಇಲ್ಲ; ಒಂದೊದ್ಸಲ ದೋಸ್ತಿಗಳ ಒತ್ತಾಯಕ್ಕೆ ಕುಡ್ದದ್ದಷ್ಟೇ,' ಎಂಬ ಮಾತುಗಳು ಬಾಯಿಯ ತುದಿಯ ವರೆಗೆ ಬಂದಿದ್ದರೂ ಅವನ ನಾಲಗೆ ಯಾಕೋ ಹೊರಳಿರಲಿಲ್ಲ. ತಂದೆಯೆದುರು ಅವನು ಮಾತಾಡಿದ್ದೇ ಕಡಿಮೆ. ಅವರೆದುರು ಸರಿಯಾಗಿ ಕುಳಿತು ಮಾತನಾಡುವ ಪರಿಪಾಠವೂ ಇರಲಿಲ್ಲ. ಆ ದಿನವೂ ಅವನು ಒಂದು ಕಾಲನ್ನು ಕಂಬಕ್ಕೆ ಊತು ನಿಂತುಕೊಂಡೇ ಅವರ ಮಾತನ್ನು ಆಲಿಸಿದ್ದ. ಏನೋ ಕಹಿ ರುಚಿ ಬಂದಂತೆ ಬಾಯನ್ನು ತಿರುಗಿಸುತ್ತ ಎದ್ದು ಹೋಗುವಾಗ ಅವರ ಕೆನ್ನೆಯ ತೆಳ್ಳಗಿನ ಸ್ನಾಯುಗಳು ಕಂಪಿಸುತ್ತಿದ್ದಂತಿದ್ದವು.



ಸಾಂಪ್ರದಾಯಕ ವಿಚಾರಗಳನ್ನು ಮನದಾಳದಿಂದ ವಿರೋಧಿಸುತ್ತಿದ್ದ ಪಾರ್ಥನಿಗೆ ಒಮ್ಮೊಮ್ಮೆ ಸ್ನೇಹಿತರೊಂದಿಗೆ ಸೇರಿ ಕುಡಿಯುವುದರಲ್ಲೋ, ಮಾಂಸಾಹಾರಿ ಸೇವಿಸುವುದರಲ್ಲೋ ತಾನೊಂದು ಬಂಡಾಯವನ್ನು ನಡೆಸುತ್ತಿದ್ದೇನೆ ಎಂಬ ತೃಪ್ತಿ ದೊರೆಯುತ್ತಿತ್ತು. ಅವರದು ಕುಂದಾಪುರದಿಂದ ಉತ್ತರಕ್ಕೆ ಹೆದ್ದಾರಿಯ ಬದಿಯಲ್ಲಿರುವ ಒಂದು ಸಣ್ಣ ಊರು. ಮನೆಯ ಆರ್ಥಿಕ ಸ್ಥಿತಿ ಗೊತ್ತಿದ್ದ ಊರ ಜನರಿಂದ ನೇರವಾಗಿಯೋ, ಪರೋಕ್ಷವಾಗಿಯೋ ಏನಾದರೂ ಮಾತು ಕೇಳಬೇಕಾಗುತ್ತಿತ್ತು. ಜನರು ಇದ್ದ ಸತ್ಯವನ್ನೇ ಬೆಟ್ಟುಮಾಡಿದರೂ, ಮನಸ್ಸಿಗೆ ಅನಗತ್ಯವಾಗಿ ನಾಟುತ್ತಿತ್ತು. ಹದಿಹರೆಯದ ಪಾರ್ಥ ಒಮ್ಮೊಮ್ಮೆ ಸಿಟ್ಟಿನಲ್ಲಿ ದಹಿಸುತ್ತಿದ್ದರೆ, ಇನ್ನೊಮ್ಮೆ ಗೊಂದಲದಲ್ಲಿ ತಿರುಚಿಹೋಗುತ್ತಿದ್ದ. ಕೆಲವೊಮ್ಮೆ ನೋವಿನಲ್ಲಿ ಬಾಡಿಹೋಗುತ್ತಿದ್ದುದೂ ಇತ್ತು.

ಉಡುಪಿಯ ಕಾಲೇಜಿನಲ್ಲಿ ವಿಜ್ಞಾನದಲ್ಲಿ ಪದವಿ ಪಡೆದ ಮೇಲೆ ಅವನಿಗೆ ದೊಡ್ಡ ಊರಿನ ಅನುಭವ ಬೇಕೆಂದೆನಿಸಿತ್ತು. ಬೆಂಗಳೂರಿನಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದ ಅವನ ಸೋದರಮಾವನ ಒತ್ತಾಸೆಯೂ ಸೇರಿ, ಕಾನೂನು ಕಲಿಯಲಿಕ್ಕೆಂದು ಬೆಂಗಳೂರಿಗೆ ಹೋಗಿದ್ದ. ಮನಸ್ಸಿಲ್ಲದ ಮನಸ್ಸಿನಲ್ಲಿ ಅವನ ತಂದೆಯೂ ಒಪ್ಪಬೇಕಾಯಿತು. ದೊಡ್ಡ ಊರೆಂದರೆ ಖರ್ಚು ಜಾಸ್ತಿಯಲ್ಲವೇ ಎಂದು ಅವರ ಹಿಂದೇಟು.

ಪಾರ್ಥನಿಗಾದರೋ ವಯೋಸಹಜವಾಗಿ ಅವನೊಳಗಿದ್ದ ಮಾನಸಿಕ ತಳಮಳ, ಅಸಮಾಧಾನ, ಅಸಹನೆಗಳಿಗೆಲ್ಲ ಬೆಂಗಳೂರಿನ ಕಾಲೇಜು-ವಾತಾವರಣವು ಬಿಡುಗಡೆಯನ್ನು ಒದಗಿಸಿದಂತಾಗಿತ್ತು. ಕಾಲೇಜಿನ ರಾಜಕೀಯ, ವಿದ್ಯಾರ್ಥಿ ಮುಂದಾಳುತನಗಳಲ್ಲಿ ಅವನು ಮುಳುಗಿ ಹೋಗಿ ಬಿಟ್ಟಿದ್ದ. ಲೆನಿನ್, ಕಾರ್ಲ್ ಮಾರ್ಕ್ಸ್, ಇತ್ಯಾದಿ ಪುಸ್ತಕಗಳನ್ನು ಓದುತ್ತ ಕ್ರಾಂತಿಕಾರಿ ಮನೋಭಾವವನ್ನು ಬೆಳೆಸಿಕೊಂಡಿದ್ದ. ಉಡುಪಿಯ ಸಂಕುಚಿತ ಎನ್ನಬಹುದಾದ ಕಾಲೇಜು ವಾತಾವರಣದಲ್ಲೇ, ಕಾಲೇಜಿನ ಮೊದಲ ವಿದ್ಯಾರ್ಥಿ ಹರತಾಳವನ್ನು, ಕಾಲೇಜಿಗೊಂದು ಕ್ಯಾಂಟೀನ್ ಇರಬೇಕು ಎನ್ನುವ ಬೇಡಿಕೆಗಾಗಿ ಏರ್ಪಡಿಸಿದ ಕೀರ್ತಿ ಅಥವಾ ಅಪಕೀರ್ತಿ ಪಾರ್ಥನದಾಗಿತ್ತು. ಬೆಂಗಳೂರಿಗೆ ಹೋದ ಮೇಲೆ ಅಲ್ಲಿ ವಿವಿಧ ಭಾಷೆ-ಪ್ರಾಂತ್ಯಗಳ ಸಹಪಾಠಿಗಳು, ವಿಭಿನ್ನ ಯೋಚನಾಧಾರೆಗಳು, ಅಧ್ಯಾಪಕರುಗಳ ವಿಚಾರ ಪ್ರಚೋದಿತ ಪಾಠಗಳು, ಕಾಲೇಜಿನ